◆ **ನೀವೊಮ್ಮೆ ಹೇಳಿದ್ದಿರಿ, ನೀವು ಹಾಸಿಗೆಯ ಮೇಲೆ ಮಲಗಿಕೊಂಡು ಷೆರಿ ವೈನ್ ಬಾಟಲ್, ಶಬ್ದಕೋಶ, ರೊಜೆಟ್‌ನ ಥೆಸಾರಸ್, ನೋಟ್ ಪ್ಯಾಡ್, ಆಶ್‌ಟ್ರೇ, ಬೈಬಲ್ ಇಟ್ಟುಕೊಂಡು ಬರೆಯುತ್ತೀನಿ ಅಂತ. ಬೈಬಲ್ ಯಾಕೆ ಇಟ್ಟುಕೊಳ್ಳುವಿರಿ?**

ಜುದೈಕ್ ಬೈಬಲ್ ಮತ್ತು ಕ್ರಿಶ್ಚಿಯನ್ ಬೈಬಲ್‌ಗಳ ಎಲ್ಲ ಭಾಷೆಗಳಲ್ಲಿನ ವ್ಯಾಖ್ಯಾನಗಳು, ಅನುವಾದಗಳು ಬಹಳ ಲಯಬದ್ಧವಾಗಿ ಅದ್ಭುತವಾಗಿವೆ. ನನಗೋಸ್ಕರ ಬೈಬಲ್ ಓದುತ್ತೇನೆ. ಯಾವುದೇ ಅನುವಾದದ, ಯಾವುದೇ ಆವೃತ್ತಿಯನ್ನು ತೆಗೆದುಕೊಂಡು ಜೋರಾಗಿ ಓದುತ್ತೇನೆ. ಆ ಭಾಷೆಯನ್ನು ಅದರ ಲಯವನ್ನು ಕೇಳುತ್ತಾ ಇಂಗ್ಲಿಷ್ ಎಂತಹ ಸುಂದರ ಭಾಷೆ ಅಂತ ಅಂದುಕೊಳ್ಳುತ್ತಿರುತ್ತೇನೆ. ನನಗೆ ಏಳೆಂಟು ಭಾಷೆಗಳು ಗೊತ್ತು. ಆದರೂ ಇಂಗ್ಲಿಷ್ ಬಹಳ ಸುಂದರ ಭಾಷೆ. ಏನನ್ನು ಬೇಕಾದರೂ ಹೇಳಬಹುದು ಅನ್ನಿಸುತ್ತದೆ.

◆ **ಅಂದರೆ, ಸ್ಫೂರ್ತಿಗಾಗಿ ಓದುವಿರಾ?**

ಅದರ ಮಧುರ ಲಯ ಹಾಗೂ ವಸ್ತುವಿಗಾಗಿ ಓದುತ್ತೇನೆ. ಕ್ರಿಶ್ಚಿಯನ್ ಆಗಿರಲು ಪ್ರಯತ್ನಿಸುತ್ತಿದ್ದೇನೆ. ಅದು ಬಹಳ ಗಂಭೀರವಾದ ವಿಷಯ. ಅದೊಂದು ತರಹ ಒಳ್ಳೆಯ ಯಹೂದಿ, ಒಳ್ಳೆಯ ಮುಸ್ಲಿಂ, ಒಳ್ಳೆಯ ಬೌದ್ಧ, ಒಳ್ಳೆಯ ಜೊರಾಷ್ಟ್ರೀಯ, ಒಳ್ಳೆಯ ಸ್ನೇಹಿತೆ, ಒಳ್ಳೆಯ ಪ್ರೇಮಿ, ಒಳ್ಳೆಯ ತಾಯಿ, ಒಳ್ಳೆಯ ಸಂಗಾತಿ ಆಗುವ ರೀತಿ. ನಿಜವೇನೆಂದರೆ ದಿನವಿಡೀ ನೀವು ಆ ರೀತಿ ಆಗಲು, ಆ ರೀತಿ ಇರಲು ಪ್ರಯತ್ನಿಸುವಿರಿ. ದಿನದ ಕೊನೆಗೆ ನಿಮ್ಮನ್ನು ನೀವು ನೋಡಿಕೊಳ್ಳಲು ಧೈರ್ಯವುಳಿದಿದ್ದರೆ ನೋಡಿಕೊಳ್ಳಿ. 'ಓ ಒಂದಷ್ಟು ಹೊತ್ತು ಅಂದುಕೊಂಡ ಹಾಗಿದ್ದೆ' ಅನ್ನಿಸುತ್ತದೆ. ನಾನು ಕ್ರಿಶ್ಚಿಯನ್ ಆಗಲು ಪ್ರಯತ್ನಿಸುತ್ತಿದ್ದೇನೆ. ನಾನೇನು ಎನ್ನುವುದನ್ನು ಬೈಬಲ್ ನನಗೆ ನೆನಪಿಸುತ್ತದೆ.

◆ **ಆ ಲಯವನ್ನು ನಿಮ್ಮ ಗದ್ಯಕ್ಕೆ ಅಳವಡಿಸಿಕೊಳ್ಳುವಿರಾ? ನಿಮ್ಮ ಗದ್ಯ ಕಿಂಗ್ ಜೇಮ್ಸ್‌ನ ರೀತಿ ಇದೆ ಎಂದು ನಿಮಗನ್ನಿಸುತ್ತಿದೆಯೇ?**

ಇಂಗ್ಲಿಷ್ ಹೇಗಿದೆ ಅಂತ ಕೇಳಿಸಿಕೊಳ್ಳಲು ಇಷ್ಟ. ಸೇಂಟ್ ವಿನ್ಸೆಂಟ್ ಮಿಲ್ಲೆ ಇಂಗ್ಲಿಷ್ ಹೇಗಿತ್ತು ತಿಳಿದುಕೊಳ್ಳಬೇಕು ಅನ್ನಿಸುತ್ತದೆ. ಅದಕ್ಕೆ ಜೋರಾಗಿ ಓದುತ್ತೇನೆ. ಅದನ್ನು ಅನುಕರಿಸಲು ಅಲ್ಲ. ಆ ಓದು ಅದೆಷ್ಟು ಶ್ರೀಮಂತ ಭಾಷೆ ಎನ್ನುವುದನ್ನು ನೆನಪಿಸುತ್ತದೆ. ಆಗ ಆ ಭಾಷೆಯನ್ನು ಆದಷ್ಟು ಸಹಜವಾಗಿ ಬಳಸಲು ಪ್ರಯತ್ನಿಸುತ್ತೇನೆ. ಅದೊಂದು ರೀತಿಯಲ್ಲಿ ಸ್ವಲ್ಪಮಟ್ಟಿಗೆ ಗೆರಾರ್ಡ್ ಮ್ಯಾನ್ಲಿ ಹಾಪ್ಕಿನ್ಸ್ ಅಥವಾ ಪಾಲ್ ಲಾರೆನ್ಸ್ ಡನ್ಬಾರ್ ಅಥವಾ ಜೇಮ್ಸ್ ವೆಲ್ಡನ್ ಜಾನ್ಸನ್‌ರನ್ನು ಓದಿದಂತೆ.

◆ **ಆ ಷೆರಿ ವೈನ್ ದಿನದ ಕೊನೆಗೂ ಇಲ್ಲ ಕಲ್ಪನೆಗೆ ಕಿಡಿ ಹೊತ್ತಿಸಲೋ?**

ಬೆಳಗ್ಗೆ ಆರೂ ಕಾಲಿಗೆ ಎದ್ದತಕ್ಷಣ ಕುಡಿಯಬಲ್ಲೆ. ಸಾಮಾನ್ಯವಾಗಿ ಒಂದು ಲೋಟ ಷೆರಿ ವೈನ್ ಹನ್ನೊಂದು ಗಂಟೆ ಹೊತ್ತಿಗೆ ಕುಡಿಯುತ್ತೇನೆ.

◆ **ಬೈಬಲ್ ಹಾಗೂ ಷೆರಿ ವೈನ್ ನಿಮ್ಮನ್ನು ಉಲ್ಲಸಿತಗೊಳಿಸಿದ ಮೇಲೆ ನೀವು ದಿನದ ಕೆಲಸವನ್ನು ಹೇಗೆ ಆರಂಭಿಸುವಿರಿ?**

ನಾನು ನೆಲೆನಿಂತ ಊರಲ್ಲೆಲ್ಲ ಒಂದು ಹೋಟೆಲ್ ರೂಮನ್ನೂ ಕಾದಿರಿಸುತ್ತೇನೆ. ಕೆಲವು ತಿಂಗಳುಗಳ ಮಟ್ಟಿಗೆ ಆ ರೂಮನ್ನು ಬಾಡಿಗೆಗೆ ತೆಗೆದುಕೊಳ್ಳುತ್ತೇನೆ. ಮನೆಯಿಂದ ಆರಕ್ಕೆ ಹೊರಟು ಕೆಲಸದ ಜಾಗಕ್ಕೆ ಆರೂವರೆ ಹೊತ್ತಿಗೆ ತಲುಪುತ್ತೇನೆ. ಹಾಸಿಗೆಯ ಮೇಲೆ ಬೋರಲು ಮಲಗಿ,